**ದಿ:15.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ಪ್ರತಿವಾದಿ ಗಳ ಪರ ಶ್ರೀ. **L.U.,**ವಕೀಲರಿಂದ:-

ನಾನು ನಿವೃತ್ತ ಶಿಕ್ಷಕನಾಗಿರುತ್ತನೆ . ನಾನು ಸನ್ 2020 ರಲ್ಲಿ ನಿವೃತ್ತಿ ಹೊಂದಿರುತ್ತೇನೆ . ಈ ದಾವೆಯನ್ನು ದಾವಾ ಆಸ್ತಿಯ ದಾಖಲೆಗಳ ಆಧಾರದ ಮೇಲೆ ದಾವೆಯನ್ನು ಸಲ್ಲಿಸಿರುತ್ತೇನೆ . ಪ್ರತಿವಾದಿಗಳು ನನ್ನ ಸ್ವಾಧೀನಕ್ಕೆ ಅಡ್ಡಿಪಡಿಸಿದ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತೇನೆ . ನನಗೆ ದಾವೆ ಆಸ್ತಿಯು ನನ್ನ ತಾಯಿ ನಿಪಿ 2 ವಿಲ್ ಮುಖಾಂತರ ಬಂದಿರುತ್ತದೆ . ನಮ್ಮ ತಾಯಿಗೆ ದಾವಾ ಆಸ್ತಿಯ ಸರ್ಕಾರ ಸನ್ 1986-87 ರಲ್ಲಿ ದರ್ಕಾಸ್ತ್ ಮೂಲಕ ಬಂದಿರುತ್ತದೆ . ನಾನು ಸದರಿ ದರ್ಕಾಸ್ತ್ ಮಂಜುರಾದ ಬಗ್ಗೆ ದೃಡೀಕರಣ

ಪತ್ರ ಮತ್ತು ಮಂಜೂರಾತಿ ಪತ್ರ ಹಾಜರುಪಡಿಸಿರುತ್ತೇನೆ . ಸಾಮಾನ್ಯವಾಗಿ ಸರ್ಕಾರದವರು ಯಾರು ಜಮೀನಿನಲ್ಲಿ ಸತತವಾಗಿ ಉಳಮೆ ಮಾಡಿಕೊಂಡು ಸ್ವಾಧೀನ ಇರುತ್ತಾರೊ ಅಂತವರಿಗೆ ಸಾಗುವಳಿ ಚೀಟಿಯನ್ನು ನೀಡುತ್ತಾರೆ ಎಂದರೆ ಸರಿ. ನಾನು ಈ ದಾವೆಯಲ್ಲಿ ಸದರಿ ಮಂಜುರಾತಿ ಪತ್ರ , ಸಾಗುವಳಿ ಚೀಟಿ , ಸರ್ಕಾರದ ಆದೇಶದ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ತಾಯಿಗೆ ಬಂದಿದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಮೂರು ಜನ ಅಣ್ಣ ತಮ್ಮಂದಿರು ಮಾತ್ರ ಇರುತ್ತೇವೆ . ನಮ್ಮ ತಾಯಿಗೆ ದಾವಾ ಆಸ್ತಿಯು ಸರ್ಕಾರದಿಂದ ಮಂಜೂರಾದ ಕಾರಣ ನನ್ನ ಉಳಿದ ಸಹೋದರರಿಗೂ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸಾಕ್ಷಿ ನನಗೆ ನನ್ನ ತಾಯಿ ನಿಪಿ 2 ರಂತೆ ವಿಲ್ ಮಾಡಿರುತ್ತಾರೆ ಎಂದು ಹೇಳುತ್ತಾರೆ . ದಾವಾ ಆಸ್ತಿಯು ನಮ್ಮ ಹೆಸರಿಗೆ ದಾವಾ ಆಸ್ತಿಯ ಖಾತೆ ವರ್ಗಾವಣೆ ಆಗುವ ಸಂದರ್ಭದಲ್ಲಿ ಸರ್ವೆ ಸ್ಕೆಚ್ ಮೂಲಕ ಆಗಿರುತ್ತದೆ . ನಾನು ಸದರಿ ಸ್ಕೆಚ್ ಅನ್ನು ಹಾಜರುಪಡಿಸಿರುತ್ತೇನೆ . ನಾನು ಸದರಿ ಸರ್ವೆ ಸ್ಕೆಚ್ ಅನ್ನು ಹಾಜರುಪಡಿಸದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು , ಆಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು